**ಆರಂಭದಲ್ಲಿ ಅವಳ ದಾಂಪತ್ಯವು ಸ್ವರ್ಗಕ್ಕೆ ಕಿಚ್ಚು ಹಚ್ಚುವ ತೆರದಲ್ಲಿತ್ತು. ಆದರೆ ದಿನಗಳೆದಂತೆ ಸತೀಶ ಅವಳೊಂದಿಗೆ ನಡೆದುಕೊಳ್ಳುವ ರೀತಿ ಬದಲಾಗಿತ್ತು. ಹೆಂಡತಿ ಎಂಬ ಮರ್ಯಾದೆ ಹೋಗಲಿ, ಹೆಣ್ಣು ಎಂಬ ಗೌರವವನ್ನೂ ಕೊಡದೆ ಹೋದ. ಅವನನ್ನೇ ಬೆಂಬಲಿಸುವ ಅವನ ತಂದೆ ತಾಯಿಯರು.**



ಈಗ ಅವಳು ವಕೀಲ ಪದದಿಂದ ನ್ಯಾಯಮೂರ್ತಿಯಾಗಿ ಬಡ್ತಿ ಹೊಂದಿದ್ದಳು. ಆದರೂ ಅವಳ ಪ್ರಯತ್ನವು ಗಂಡ ಹೆಂಡಿರ ಸಂಬಂಧವನ್ನು ಜೋಡಿಸಿಡುವುದೇ ಆಗಿತ್ತು.

ಅಂದು ಬಂದ ಒಂದು ಕೇಸ್ ಅವಳನ್ನು ಚಿಂತೆಗೀಡುಮಾಡಿತ್ತು. ಅವರಿಬ್ಬರೂ ಮದುವೆಯಾಗಿ ನಾಲ್ಕು ವರ್ಷಗಳೂ ಕೂಡ ಆಗಿರಲಿಲ್ಲ. 'ನೀವಿಬ್ಬರೂ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳಲು ಇನ್ನೂ ಸ್ವಲ್ಪ ಸಮಯ ನೀಡಬೇಕು ಎಂದು ನನ್ನ ಭಾವನೆ. ನಿಮ್ಮಿಬ್ಬರಲ್ಲೂ ಅನೇಕ ತಪ್ಪುಕಲ್ಪನೆಗಳಿವೆ. ನಿಮ್ಮ ವಿಚ್ಛೇದನದ ನಿರ್ಧಾರವನ್ನು ಮರುಪರಿಶೀಲಿಸಲು ಮತ್ತು ಸಂದರ್ಭಗಳನ್ನು ಅರ್ಥ ಮಾಡಿಕೊಳ್ಳುವ ಮೂಲಕ ನಿಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ನಾನು ನಿಮಗೆ 6 ತಿಂಗಳ ಹೆಚ್ಚುವರಿ ಸಮಯವನ್ನು ನೀಡುತ್ತಿದ್ದೇನೆ. ಈ ವಿಷಯದಲ್ಲಿ ನೀವು ಮತ್ತೆ ನ್ಯಾಯಾಲಯಕ್ಕೆ ಬರಬೇಕಾಗಿಲ್ಲ ಎಂದು ನಾನು ಭಾವಿಸುತ್ತೇನೆ' ಎಂದು ಅವಳು ಅವರಿಗೆ ಆರು ತಿಂಗಳ ಗಡುವನ್ನು ಕೊಟ್ಟಿದ್ದಳು.

ಸುಮೀತ ಮತ್ತು ಸುಹಾಸಿನಿಯರ ಮದುವೆಯಾಗಿ ಕೇವಲ ಮೂರೂವರೆ ವರ್ಷಗಳು ಕಳೆದಿದ್ದವು. ಅವರಿಗೆ ಸುರಭಿ ಎಂಬ ಒಂದು ವರ್ಷದ ಮಗಳು ಇದ್ದಳು. ಅವರಿಬ್ಬರದೂ ಪ್ರೇಮ ವಿವಾಹವಾಗಿದ್ದರೂ ಎರಡೂ ಕುಟುಂಬಗಳಲ್ಲೂ ಸ್ನೇಹವಿತ್ತು. ಪರಸ್ಪರ ಗೌರವವಿತ್ತು. ಸುಮೀತ ಹಾಗೂ ಸುಹಾಸಿನಿಯ ಅಣ್ಣ ನಿತೀನ್ ಇಬ್ಬರೂ ಗೆಳೆಯರಾಗಿದ್ದುದೇ ಈ ಮದುವೆಗೆ ಅಡಿಪಾಯವಾಗಿತ್ತು. ಸುಮೀತ ಒಂದು ಆಟೊಮೊಬೈಲ್ ಕಂಪನಿಯಲ್ಲಿ ಎಂಜಿನಿಯರ್ ಆಗಿದ್ದ. ಅವರದೇ ಆದ ಎರಡು ಮಹಡಿಯ ಸ್ವಂತ ಮನೆಯೂ ಇತ್ತು. ಸುಹಾಸಿನಿಯ ಬ್ಯುಟೀಷಿಶಿಯನ್ ಕೋರ್ಸ್ ಮುಗಿದಿತ್ತು. ಮದುವೆಗಿಂತ ಮೊದಲು ತವರುಮನೆಯಲ್ಲಿ ಒಂದು ಚಿಕ್ಕ ರೂಮಿನಲ್ಲಿ ಆಕೆ ತನ್ನದೇ ಆದ ಬ್ಯೂಟಿ ಪಾರ್ಲರ್ ನಡೆಸುತ್ತಿದ್ದಳು. ಈಗ ಇಲ್ಲಿಯೂ ಮನೆಯ ಕೆಳಮಹಡಿಯಲ್ಲಿ ತನ್ನ ಪಾರ್ಲರ್ ನಡೆಸತೊಡಗಿದ್ದಳು. ಸುಮೀತನ ತಾಯಿ ಮತ್ತು ತಂದೆ ಸುಹಾಸಿನಿಯನ್ನು ತಮ್ಮ ಮಗಳಂತೆಯೇ ಪ್ರೀತಿಸುತ್ತಿದ್ದರು. ಸುಹಾಸಿನಿಯೂ ಅವರನ್ನು ಗೌರವಿಸುತ್ತಿದ್ದಳು. ಸುಮೀತ ಅವರಿಗೆ ಒಬ್ಬನೇ ಮಗ. ಸುರಭಿ ಹುಟ್ಟಿದ ನಂತರವಂತೂ ಮನೆಯಲ್ಲಿ ಸಂತೋಷವೇ ತುಂಬಿತ್ತು. ಸುರಭಿ ಅಜ್ಜ ಅಜ್ಜಿಯರ ಕಣ್ಮಣಿಯಾಗಿದ್ದಳು.

ಅದು ಮದುವೆಯ ಸೀಜನ್ನು. ಹೀಗಾಗಿ ಸುಹಾಸಿನಿಯೂ ಪಾರ್ಲರ್ ಕೆಲಸದಲ್ಲಿ ಬಿಜಿಯಾಗಿದ್ದಳು. ಸಾಮಾನ್ಯವಾಗಿ ಸಂಜೆ 5 ಗಂಟೆಗೆ ಮುಗಿಯುವ ಅವಳ ಕೆಲಸ ಆ ದಿನ ರಾತ್ರಿ 9 ಗಂಟೆಯವರೆಗೂ ಮುಗಿಯಲಿಲ್ಲ. ಸುಮೀತ ಸುಮಾರು 7 ಗಂಟೆಗೆ ಆಫೀಸಿನಿಂದ ಹಿಂತಿರುಗಿದ್ದನು. ಪ್ರತಿ ದಿನ ನಗುಮೊಗದಿಂದ ಎದುರುಗೊಳ್ಳುವ ಸುಹಾಸಿನಿ ಅಂದು ಬಿಜಿ ಆಗಿದ್ದರಿಂದ ತಾಯಿಯೇ ಚಹಾ ಮಾಡಿಕೊಟ್ಟಿದ್ದರು. ಮಗಳು ಸುರಭಿಗೆ ಅಂದು ಬೆಳಗಿನಿಂದ ಜ್ವರ. ಅವಳನ್ನು ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗಲು ಸುಹಾಸಿನಿಗೆ ಹೇಳಿಹೋಗಿದ್ದರೂ ಅವಳಿಗೆ ಕೆಲಸದ ಒತ್ತಡದಲ್ಲಿ ಆಸ್ಪತ್ರೆಯಲ್ಲಿ ಹೆಸರು ಬರೆಸಲೂ ಸಾಧ್ಯವಾಗಿರಲಿಲ್ಲ. ನಾಳೆ ಹೋದರಾಯಿತು ಎಂದುಕೊಂಡಿದ್ದಳು. ಮಗು ಕೆಮ್ಮಿ ಕೆಮ್ಮಿ ಹೈರಾಣವಾಗಿತ್ತು. ಹಣೆ